ಕೇಳಿದಳು. 'ಮಾಡೋದೇನು ದೊಡ್ಡಮ್ಮ... ನಾನಿದನ್ನು ಯಾರಿಗಾದರೂ ಕೊಟ್ಟು ಬಿಡ್ತೀನಿ. ಮಕ್ಕಳಿಲ್ಲದ ಕಪಲ್ಸ್ ಇರ್ತಾರಲ್ಲ ಅವರಿಗೆ, ಅಡಾಪ್ಷನ್‌ಗೆ' ಅಂದಳು.

'ಹಾಗಾದರೆ ನನಗೇ ಕೊಡು' ಎಂದಳು ಆತ್ಮವಿಶ್ವಾಸದಿಂದ. 'ನಿಮಗ? ನೀವು ಸಾಕ್ತೀರಾ?' ಅಂತ ಅಚ್ಚರಿಯಿಂದ ಕೇಳಿದವಳನ್ನು ನೋಡುತ್ತಾ, 'ಹೌದು, ನಾನೇ ಸಾಕ್ಕೋತೀನಿ, ನಂಗೂ ಯಾರೂ ಇಲ್ಲ. ಒಬ್ಬಳೇ. ಈ ಕೂಸನ್ನ ಸಾಕೋದ್ರಲ್ಲಿ ಬದುಕಲ್ಲಿ ಒಂದಿಷ್ಟು ಆಸಕ್ತಿ ಬರುತ್ತೆ. ಇದರ ಆಟಪಾಟ ನೋಡ್ತಾ ಸುಖವಾಗುತ್ತೆ' ಅಂದಳು. 'ತಮಾಷೆ ಮಾಡ್ತಿಲ್ಲ ತಾನೆ ದೊಡ್ಡಮ್ಮ? ಇದಕ್ಕೆ ನಿಮ್ಮ ಮಗ ಸೊಸೆ ಒಪ್ಕೋತಾರ?' ಅಂತ ಕೇಳಿದಳು. 'ಅವರ್‍ಯಾಕೆ ಒಪ್ಕೋಬೇಕು? ಇದು ನನ್ನ ಸ್ವಂತ ನಿರ್ಧಾರ. ನನ್ನ ಬದುಕು, ನನ್ನ ನಿರ್ಧಾರ. ಅವರ ಬದುಕಿನ ನಿರ್ಧಾರಕ್ಕೆ ನನ್ನ ಅನುಮತಿ ತಗೋಳ್ಳೋ ಕ್ರಮ ಅವರಿಗಿಲ್ಲ. ಹಾಗೇ ನನ್ನ ನಿರ್ಧಾರಗಳಿಗೆ ನಾನೇನು ಅವರನ್ನು ಕೇಳಬೇಕಾಗಿಲ್ಲ' ಅಂದಳು ಶಾಂತವಾಗಿ. 'ಆದರೂ... ಈ ವಯಸ್ಸಿನಲ್ಲಿ ನೀನು ಇಷ್ಟು ಸಣ್ಣ ಮಗೂನ ಸಾಕ್ತೀನಿ ಅಂದ್ರೆ ನಂಗೆ ಆಶ್ಚರ್ಯವಾಗುತ್ತೆ. ಕಷ್ಟ ಆಗೋಲ್ವ ನಿಂಗೆ?' ಎಂದಳು. 'ಇಲ್ಲ ಕಣೆ, ಹಾಗೇ ಈ ಮಗೂನ ನಾನು ಕೇವಲ ಸಾಕಕ್ಕೆ ಅಂತ ಕೇಳ್ತಿಲ್ಲ. ದತ್ತು ತಗೋತಿದೀನಿ. ಏನೇನು ಕಾಗದ ಪತ್ರ ಮಾಡಿಸಬೇಕೋ ಅದೆಲ್ಲ ಆಗಬೇಕು' ಎಂದಳು ಖಚಿತವಾಗಿ. 'ಸರಿ ನಿನ್ನಿಷ್ಟ. ನಿಂಗೆ ಕೊಡೋದಕ್ಕೆ ನಂಗೇನು ಅಬ್ಜೆಕ್ಷನ್ ಇಲ್ಲ. ನನ್ನ ಮಗು ಒಳ್ಳೇ ಕಡೆ ಬೆಳೀತಿದೆ ಅಂತ ನಾನೂ ನೆಮ್ಮದಿಯಾಗಿರ್ತೀನಿ' ಅಂದಳು. ವಿನುತೆಯ ತಾಯಿ, 'ಮೊಮ್ಮಕ್ಕಳನ್ನು ಸಾಕುವ ವಯಸ್ಸು ನಮ್ಮದು. ಈ ವಯಸ್ಸಿನಲ್ಲಿ ಒಂದು ಮಗುವಿಗೆ ತಾಯಿಯಾಗುವುದು ಅಷ್ಟು ಸುಲಭವಲ್ಲ. ಯೋಚಿಸಿ ಅಕ್ಕ. ಆದರೂ ಮುಂದೆ ನಿಮ್ಮ ಮಗನ ಹಾಗೆ ಮಾಡದೇ ಇವಳಾದರೂ ನಿಮಗೆ ದಿಕ್ಕಾಗಬಹುದು' ಎಂದಳು. 'ಹಾಗೇನಿಲ್ಲ, ನನ್ನ ಏಕತಾನತೆಗೆ, ಏಕಾಂಗಿತನಕ್ಕೆ ಒಂದು ಔಷಧದಂತೆ ಈ ಮಗು ನನಗೆ. ಅವಳು ಬಂದ ಮೇಲೆ ನನ್ನ ಮನಸ್ಸಿನ ಬೇಜಾರೆಲ್ಲ ತಂತಾನೆ ಕಳೆದುಹೋಗುತ್ತಿದೆ. ಅವಳನ್ನು ಸಾಕುವವರೆಗೆ ಅದು ನನ್ನದೆಂಬ ಮೋಹ. ಆಮೇಲೆ ನಿರ್ಮೋಹವಾಗಿ ಅವಳಿಷ್ಟದಂತೆ ಬದುಕಲು ಬಿಡುತ್ತೇನೆ. ಈ ಅನುಭವ ಈಗಾಗಲೇ ಇರುವುದರಿಂದ ನನ್ನ ಜೀವನಕ್ಕೆ ದಿಕ್ಕಾಗುತ್ತಾಳೆ ಅಂತ ಅಂದುಕೊಂಡು ಇವಳನ್ನು ಬೆಳೆಸುವುದಿಲ್ಲ. ಬೆಳೆಸುವಾಗಿನ ಸಂತೋಷವೇ ಮುಖ್ಯ' ಎಂದಳು ಮಗುವನ್ನು ಮುದ್ದಿಸುತ್ತ.

ತಾನು ದತ್ತು ಪಡೆದ ಮಗುವಿನ ತೊಟ್ಟಿಲು ಶಾಸ್ತ್ರದ, ನಾಮಕರಣದ ಫೋಟೊಗಳನ್ನು ಸ್ಟೇಟಸ್‌ನಲ್ಲಿ ಹಾಕಿದಾಗ ಗಾಬರಿಯಿಂದ ಮಗ ಸೊಸೆ ಫೋನ್ ಮಾಡಿದರು. 'ಇಂಥ ಡಿಸಿಶನ್ ಈ ವಯಸ್ಸಿನಲ್ಲಿ ಯಾಕೆ ತಗೊಂಡೆ? ನಮ್ಮನ್ನು ಒಂದು ಮಾತು ಕೇಳದೆ ಹೇಗೆ ನಿರ್ಧರಿಸಿದೆ?' ಅಂತ ಕೂಗಾಡಿದರು. ಒಂದಿಷ್ಟೂ ಸಂಯಮ ಕಳಕೊಳ್ಳದೆ, 'ನನ್ನ ಪರ್ಸನಲ್ ವಿಷಯಗಳಲ್ಲಿ ಮೂಗುತೂರಿಸೋ ಹಕ್ಕು ನಿಮಗೂ ಇಲ್ಲ ಅಲ್ವ? ನಿಮ್ಮ ಬದುಕಿನ ತೀರ್ಮಾನಗಳನ್ನು ನೀವು ಹೇಗೆ ತೆಗೆದುಕೊಳ್ಳುತ್ತೀರೋ, ಹಾಗೆ ನಾನು ನನ್ನ ಬದುಕಿನ ಕುರಿತು ತೀರ್ಮಾನಗಳನ್ನು ತೆಗೆದುಕೊಳ್ಳುವ ಹಕ್ಕಿದೆ. ಇದು ನನ್ನ ವೈಯಕ್ತಿಕ ನಿರ್ಧಾರ. ಹೀಗೆ ಯೋಚಿಸುವುದರಲ್ಲಿ ಏನು ತಪ್ಪಿಲ್ಲ, ಇದನ್ನು ನಾನು ನಿಮ್ಮಿಂದಲೇ ಕಲಿತಿದ್ದು' ಅಂದಳು. ಅತ್ತಲಿಂದ ಫೋನ್ ಕಟ್ಟಾಯಿತು. ಅವರ ಬಳಿ ಯಾವ ಮಾತುಗಳೂ ಉಳಿದಿರಲಿಲ್ಲ. ಸುನಂದೆಗೂ ಯಾವ ಮಾತುಗಳೂ ಬೇಕಿರಲಿಲ್ಲ.

**ಉಷಾ ನರಸಿಂಹನ್**

ಕತೆಗಾರ್ತಿ ಉಷಾ ಮೈಸೂರಿನವರು. ಕತೆ, ಕಾದಂಬರಿ, ಕವಿತೆ, ನಾಟಕ, ಪ್ರಬಂಧ ಪ್ರಕಾರಗಳಲ್ಲಿ ಬರೆದಿರುವ ಅವರು 15ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.